1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಸಾಗರ

ಸಿ.ಸಿ ನಂ. 1586/2024

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಅಜಯ ಜಿ ಎಂ |
| ತಂದೆಯ/ಗಂಡನ ಹೆಸರು | : | ಮಹೇಶ್ ಚಂದ್ರ ಜಿ ಆರ್ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು |
| ವಾಸಃ | : | ಶೃಂಗೇರಿ |

ಸಿ.ಡಬ್ಲ್ಯೂ- 7 ಪಿ.ಡಬ್ಲ್ಯೂ-7

ದಿನಾಂಕ 04.03.2026 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ

ನಾನು 2017 ಆಗಸ್ಟ್ ರಿಂದ 2018 ಮಾರ್ಚ್ ವರೆಗೆ ನಾನು ಸಾಗರ ಸಬ್ ಡಿವಿಜಿನಲ್ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 26.11.2017 ರಂದು ಚಾಸಾ-1 ರವರು ಹಲ್ಲೆಯ ಹಿನ್ನೆಲಯಲ್ಲಿ ಗಾಯಗೂಂಡು ಚಿಕಿತ್ಸೆಗಾಗಿ ಬಂದಿರುತ್ತಾರೆ. ಚಾಸಾ 1 ರವರನ್ನು ಪರಶೀಲಿಸಲಾಗಿ ಚಾಸಾ-1 ರವರ ಈ ಕೆಳಕಂಡ ಗಾಯಗಳು ಆಗಿರುತ್ತದೆ

1. Lacerated contusion of cheek Wound measuring 3cm long x 1 cm.
2. Tenderness present over the left cheek

   ದಿಃ22.12.2017 ರಂದು ಚಾಸ-1 ರವರು ಪುನಃ ತಪಾಸಣೆಗಾಗಿ ಬಂದಿದ್ದು ಆಗ ಅವರನ್ನು ಪರಿಶೀಲನೆ ಮಾಡಲಾಗಿ ಈ ಕೆಳಕಂಡತೆ ಕಂಡುಬಂದಿರುತ್ತದೆ.

   1. Left Zygomatic fracture was operated at the Malland ENT Hospital, Shivamogga

   ಈ ಮೇಲಿನ ಗಾಯಗಳು ತೀವ್ರ ಸ್ವರೂಪದ ಗಾಯಗಳು ಎಂದು ನಾನು ಗಾಯದ

ಪ್ರಮಾಣಪತ್ರಗಳನ್ನು ನೀಡಿರುತ್ತೇನೆ. ಸಾಕ್ಷಿಗೆ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸದರಿ ಗಾಯದ ಪ್ರಮಾಣಪವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ- 3(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿ ಪರ ವಕೀಲರಾದ ಶ್ರೀ.ಪಿ ಎಸ್ ರವರಿಂದ

ದಿನಾಂಕಃ 26.11.2017 ರಂದು ಚಾಸಾ-1 ರವರು ಒಳರೋಗಿ ಆಗಿರಲಿಲ್ಲ. ಅವರ ಹೊರ ರೋಗಿ ಚೀಟಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ಚಾಸಾ-1 ರವರು ಯಾರ ಜೊತೆ ಬಂದಿದ್ದರು ಎಂದು ನಾನು ಗಾಯದ ಪ್ರಮಾಣ ಪತ್ರದದಲ್ಲಿ ನಮೂದು ಮಾಡಿರುವುದಿಲ್ಲ. ಆ ದಿನ ಚಾಸಾ-1 ರವರಿಗೆ ರಕ್ತ ಸೋರಿಕೆ ಇತ್ತು. ಈ ಬಗ್ಗೆ ನಿಪಿ-3 ರಲ್ಲಿ ನಮೂದು ಮಾಡಿರಲಿಲ್ಲ ಎಂದರೆ ಸರಿ. ಎಕ್ಸರೇ ಸೌಕರ್ಯ ನಮ್ಮ ಆಸ್ಪತ್ರೆಯಲ್ಲಿ ಇಲ್ಲದೇ ಇದ್ದುದರಿಂದ ದೊಡ್ಡ ಆಸ್ಪತ್ರೆಗೆ ಹೋಗಲು ನಾನು ತಿಳಿಸಿರುತ್ತೇನೆ. ಯಾವುದೇ ಹೆಚ್ಚಿನ ಚಿಕಿತ್ಸಾ ಸೌಕರ್ಯ ಗಳು ನಮ್ಮ ಆಸ್ಪತ್ರೆಯಲ್ಲಿ ಇಲ್ಲ ಎಂದು ನಾನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಚಾಸಾ-1 ರವರು ದೊಡ್ಡ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯ ಬೇಕು ಎಂದು ನಾನು ಲಿಖಿತವಾಗಿ ಶಿಪಾರಸ್ಸು ಮಾಡಿರುವುದಿಲ್ಲ. ಚಾಸಾ-1 ರವರು ನೀಡಿದ ಬಿಡುಗಡೆ ಸಾರಾಂಶವನ್ನು ನಾನು ನಮ್ಮ ಕಡತದಲ್ಲಿ ಇಟ್ಟಿರುತ್ತೇನೆ. ಮಲ್ನಾಡ್ ಆಸ್ಪತ್ರೆ, ಶಿವಮೊಗ್ಗದಲ್ಲಿ ಚಾಸಾ-1 ರವರು ದಾಖಲಾದ ಬಗ್ಗೆ ನಾನು ದಿನಾಂಕ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-3 ರಲ್ಲಿ ನಮೂದು ಮಾಡಿರುವ ಬಿಡುಗಡೆ ಸಾರಾಂಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಿಃ22.12.2017 ರಂದು ಬಿಡುಗಡೆ ಸಾರಾಂಶವನ್ನು ನನಗೆ ನೀಡಿರುತ್ತಾರೆ. ದಿಃ22.12.2017 ರ ವರೆಗೆ ಎಷ್ಟು ದಿನ ಒಳರೋಗಿಯಾಗಿ ದಾಖಲಾಗಿದ್ದರು ಎಂದು ನಾನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಿಪಿ-3 ರಲ್ಲಿ ನಮೂದು ಮಾಡಿರುವುದಿಲ್ಲ ಕೇವಲ ಗಾಯದ ತೀವ್ರತೆ ನಮೂದು ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಮಲ್ನಾಡ್ ಆಸ್ಪತ್ರೆಯಲ್ಲಿ ತೆಗೆದುಕೊಂಡ ಚಿಕಿತ್ಸೆಯ ವ್ಯಧ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. Left

Zygomatic fracture ಮತ್ತು Renocronal ಗೆ ಲಿಂಕ್ ಇದೆ ಎಂದರೆ ಕೇವಲ insition ಮಾತ್ರ ತೆಗೆದುಕೊಂಡು ಸರ್ಜರಿ ಮಾಡಲಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಚಾಸಾ–1 ರವರ ಸಿಟಿ ಸ್ಕ್ಯಾನ್ ಹಾಗೂ ಎಕ್ಸರೇ ಗಳನ್ನು ಪರಿಶೀಲನೆ ಮಾಡದೇ ನಿಪಿ–3 ರಲ್ಲಿ ಗಾಯದ ತೀವ್ರತೆ ಬರೆಯಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ನಾನು ಬಿಡುಗಡೆ ಸಾರಾಂಶದ ಆದಾರದ ಮೇಲೆ ಗಾಯದ ತೀವ್ರತೆಯನ್ನು ಹೇಳಿರುತ್ತೇನೆ ಎಂದು ಉತ್ತರಿಸುತ್ತಾರೆ. ಚಾಸಾ–1 ಹಾಗೂ ಪೊಲೀಸರ ಒತ್ತಾಯದ ಮೇರೆಗ ನಿಪಿ–3 ಅನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಗಾಯಾದ ಅವಧಿಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ–3 ರಲ್ಲಿ ನಮೂದು ಮಾಡಿದ ಗಾಯಗಳು ಒರಟಾದ ಜಾಗದಲ್ಲಿ ಹಾಗೂ ಒರಟಾದ ರಸ್ತೆಯಲ್ಲಿ ಬಿದ್ದರೆ ಆಗುತ್ತದೆ ಎಂದರೆ ಸರಿ. ಬಿಡುಗಡೆ ಸಾರಾಂಶದಲ್ಲಿ ನಾನು ಹೇಳಿದಂತಹ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರ ಬಿಡುಗಡೆ ಸಾರಾಂಶ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಬಿಡುಗಡೆ ಸಾರಾಂಶವನ್ನು ಪರಿಶೀಲಿಸದೆ ನಿಪಿ–3 ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಗಾಯದ ಪ್ರಮಾಣಪತ್ರ ನೀಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.